# ತಂತಿಯಲಿ ಜೀವ ಮಿಡಿದಂತೆ...

**ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ಅಂದರೆ ಜೋಡಿ ವಯೊಲಿನ್ ಕಣ್ಣಮುಂದೆ ಬರುತ್ತದೆ. ಆ ಮಟ್ಟಿಗೆ ಜಗತ್ತಿನಾದ್ಯಂತ ಹೆಸರಾಗಿರುವ ಈ ಜೋಡಿಗೆ, ಕಲಾವಿದರ ಸ್ವರ್ಗ ಎನಿಸಿರುವ ಸಿಡ್ನಿಯ 'ಅಪೇರಾ ಹೌಸ್'ನಲ್ಲಿ ಕಛೇರಿ ನೀಡಿದ ಹೆಗ್ಗಳಿಕೆ ಇದೆ. ಈ ಸಹೋದರರು ವಯೊಲಿನ್ ಹಿಡಿದು ಕೂತರೆ ತಂತಿಯಲ್ಲಿ ನಾದ ಅರಳುತ್ತದೆ, ಜೀವ ಮಿಡಿಯುತ್ತದೆ. ನಾಗರಾಜ್, ಮಂಜುನಾಥ್ – ಇಬ್ಬರ ವ್ಯಕ್ತಿತ್ವ, ಯೋಚನೆ, ಯೋಜನೆಗಳೆಲ್ಲವೂ ಬೇರೆ ಬೇರೆಯಾದರೂ ಸಂಗೀತದ ಮನೋಧರ್ಮ ಒಂದೇ. ಈ ಸಂಗೀತ ಸಖ್ಯದ ಬಗ್ಗೆ ವಿದ್ವಾನ್ ಮೈಸೂರು ನಾಗರಾಜ್ ಅವರೊಂದಿಗಿನ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.**

**■ ಕಟ್ಟೆ ಗುರುರಾಜ್**



◆ ವಯೊಲಿನ್ ನಲ್ಲಿ ಪರಿಪೂರ್ಣ ವಾದನ ಶೈಲಿ ಅಂದರೆ ಏನು?

ಪರಿಪೂರ್ಣ ಅಂದರೆ, ಗಾಯಕರಾದವರಿಗೆ ಏನೇನು ಹಾಡಲು, ಪ್ರಯೋಗ ಮಾಡಲು ಸಾಧ್ಯವಿದೆಯೋ ಅದನ್ನೆಲ್ಲಾ ವಯೊಲಿನ್‌ನಲ್ಲಿ ತರುವುದು. ಇದು ನಮ್ಮ ತಂದೆಯ ಕನಸು ಮತ್ತು ತುಡಿತ. ಕರ್ನಾಟಕ ಸಂಗೀತದಲ್ಲಿ ಹದಿಮೂರಕ್ಕೂ ಹೆಚ್ಚು ಗಮಕಗಳಿವೆ. ಎಲ್ಲವನ್ನು ವಯೊಲಿನ್‌ನಲ್ಲಿ ಅದ್ಭುತವಾಗಿ ಮೂಡಿಸಬಹುದು. ಉದಾಹರಣೆಗೆ, ರಘುಪತಿ ರಾಘವ ರಾಜಾರಾಮ. ಇದರಲ್ಲಿ ರಾಘವ ಅಂತ ಸ್ವರವನ್ನು ಜಾರಿಸುತ್ತೇವೆ. ಇದನ್ನು ಸ್ಲೈಡಿಂಗ್, ಮೀಂಡ್ ಅಂತಾರೆ. ಇಂಥದ್ದನ್ನೆಲ್ಲ ಪ್ರಭುತ್ವಯುತವಾಗಿ ವಯೊಲಿನ್‌ನಲ್ಲಿ ಮಂಡನೆ ಮಾಡೋಕೆ ಸಾಧ್ಯವಾಗುವುದನ್ನು ಪರಿಪೂರ್ಣ ಅಂತಾರೆ.

◆ ದ್ವಂದ್ವ ಕಛೇರಿಗಳಲ್ಲಿ ನೀವು, ನಿಮ್ಮ ತಮ್ಮ ಮಂಜುನಾಥ್ ಹೇಗೆ ಮಾನಸಿಕವಾಗಿ ಒಂದಾಗ್ತೀರಿ?

ನಾವಿಬ್ಬರೂ ಒಬ್ಬರೇ ಗುರುಗಳು, ಅಂದರೆ ನಮ್ಮ ತಂದೆ ವಿದ್ವಾನ್ ಎಸ್. ಮಹದೇವಪ್ಪ ಅವರ ಹತ್ತಿರ ಕಲಿತಿದ್ದರಿಂದ ಮಾನಸಿಕ ಹೊಂದಾಣಿಕೆ (ಮೆಂಟಲ್ ಅಲೈನ್ ಮೆಂಟ್) ಸುಲಭ. ಕಛೇರಿ ಮುಗಿಯುವ ತನಕ ನಮ್ಮಗಳ ಯೋಚನೆ, ಯೋಜನೆ, ಮಂಡಣೆ ಬದಲಾಗುವುದಿಲ್ಲ. ನಿಮಗೆ ಆಶ್ಚರ್ಯ ಆಗಬಹುದು, ವೇದಿಕೆ ಏರಿದ ಕೂಡಲೇ ಮಂಜುನಾಥ್ ತಲೆಯಲ್ಲಿ ಏನು ಓಡ್ತಾ ಇರಬಹುದು ಅಂತ ನನಗೂ, ನನ್ನ ತಲೆಯಲ್ಲಿ ಯಾವ ರಾಗ ಇರಬಹುದು ಅಂತ ಅವನಿಗೂ ಬಹಳ ಬೇಗ ಗೊತ್ತಾಗುತ್ತೆ.

◆ ನಿಮ್ಮ ತಂದೆ ಮಹದೇವಪ್ಪ ಏನೇನು ಕಲಿಸಿದರು?

ಸಂಗೀತ ಮತ್ತು ಹೊಂದಾಣಿಕೆ. ಕಛೇರಿಗಳಲ್ಲಿ ನಮ್ಮ ತಂದೆ, ತಾವು ಹೈಲೈಟ್ ಆಗುವ ಜಾಗಗಳು ಏನಿದೆ ಅಷ್ಟನ್ನು ಮಾತ್ರ ನುಡಿಸಿ, ಉಳಿದ ಭಾಗ ಅಂದರೆ, ಹಾಡಿನ ಆರಂಭದಲ್ಲಿ ಅವರು ನುಡಿಸಿ, ಸೆಕೆಂಡ್ ಆಫ್‌ನಲ್ಲಿ ನನಗೆ ಹೆಚ್ಚು ಅವಕಾಶ ಕೊಡೋರು. ಕಾರಣ ಇಷ್ಟೇ, ನನ್ನ ಹಾಗೂ ಸಂಗೀತ ಕೇಳಲು ಬಂದ ಯುವಕರ ವಯಸ್ಸು ಒಂದೇ ಆಗಿತ್ತು. ಅವರಿಗೆ ಬೇಕಾದ ವೇಗ, ರಾಗದಲ್ಲಿ ನುಡಿಸುತ್ತಿದ್ದೆ. ಇಂಥವನ್ನೆಲ್ಲಾ ಅಪ್ಪನಿಂದ ಕಲಿತೆ.

◆ ತಂದೆಯೇ ಗುರುವಾಗಿದ್ದರ ಲಾಭ ಏನು?

ದಿನದ ಇಪ್ಪತ್ತನಾಲ್ಕೂ ಗಂಟೆ ಅವರ ಹದ್ದುಗಣ್ಣುಗಳಲ್ಲೇ ನಮ್ಮ ಸಂಗೀತ ಅಭ್ಯಾಸ ನಡೆಯುತ್ತಿತ್ತು. ತಪ್ಪು ನುಡಿಸಿದ ತಕ್ಷಣ ಸರಿ ಮಾಡುತ್ತಿದ್ದರು. ನನ್ನ ಮತ್ತು ತಮ್ಮನ ಮನೋಧರ್ಮದಲ್ಲಿ ಹೊಂದಾಣಿಕೆ ತಂದರು. ಅವನಿಗೆ ಗೊತ್ತಿಲ್ಲದಂತೆ ನನ್ನಲ್ಲಿ, ನನಗೆ ಗೊತ್ತಿಲ್ಲದಂತೆ ಅವನಲ್ಲಿ ಆರೋಗ್ಯಕರ ಸ್ಪರ್ಧೆ ಹಚ್ಚೋರು. ಆಗ ನನ್ನನ್ನು ಮೀರಿಸಲು ಅವನು, ಅವನಿಗಿಂತ ಚೆನ್ನಾಗಿ ನುಡಿಸಬೇಕು ಅಂತ ನಾನು ಸಿದ್ಧರಾಗುತ್ತಿದ್ದರಿಂದ ನಮ್ಮೊಳಗಿನ ಸಂಗೀತ ವಿಸ್ತಾರವಾಗುತ್ತಾ ಹೋಯಿತು.

◆ ನಿಮ್ಮಲ್ಲಿ ನಾನೇ ಮೇಲು ಅನ್ನೋ ಮನೋಭಾವ ಮೂಡಲಿಲ್ಲವೇ?